# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 191
2. ಸದಸ್ಯರ ಹೆಸರು : ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸುವವರು : ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು
4. ಉತ್ತರಿಸುವ ದಿನಾಂಕ : 14-12-2021

********

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಲ್ಲಿ 1978 ರಿಂದ 2019 ರವರೆಗೆ ಎಲ್ಲಾ ಸಿಬ್ಬಂದಿ ಮತ್ತು ಅಧಿಕಾರಿಗಳ ಜೇಷ್ಠತೆಯನ್ನು ಪರಿಷ್ಕರಿಸಲು ಇಲಾಖೆಯ ಅಪರ ನಿರ್ದೇಶಕರ ಅಧ್ಯಕ್ಷತೆಯಲ್ಲಿ ದಿನಾಂಕ: 04.03.2020 ರಲ್ಲಿ ಸಮಿತಿ ರಚನೆ ಆಗಿದ್ದು, ಅಪರ ನಿರ್ದೇಶಕರು ಇತರ ವೃಂದದ ಸಿಬ್ಬಂದಿ ವರ್ಗದವರ ಜೇಷ್ಠತೆಯನ್ನು ಪರಿಷ್ಕರಿಸದೆ, ಕೇವಲ ಸಹಾಯಕ ನಿರ್ದೇಶಕರ ವೃಂದದ ಜೇಷ್ಠತೆಯನ್ನು ಮಾತ್ರ ಪರಿಷ್ಕರಿಸಿದ್ದು ಇದರಿಂದಾಗಿ ಅರ್ಹತೆ ಇರುವ ಇತರೆ ವೃಂದದ ಸಿಬ್ಬಂದಿಗಳು ಮುಂಬಡ್ತಿ ಹಾಗೂ ಇತರೆ ಸೌಲಭ್ಯಗಳಿಂದ ವಂಚಿತರಾಗಿರುವುದು ನಿಜವೆ: | ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎಂ.ಎ. ಸಂಖ್ಯೆ 1151/2018 ಮತ್ತು ರಿಟ್ ಅರ್ಜಿ ಸಂಖ್ಯೆ:764/2018 ಹಾಗೂ ಸಂಬಂಧಿಸಿದ ಪ್ರಕರಣಗಳಲ್ಲಿ ದಿನಾಂಕ:10.05.2019 ರಂದು ನೀಡಿರುವ ತೀರ್ಪಿನ ಮೇರೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಆದೇಶ ಸಂಖ್ಯೆ: ಸಿಆಸುಇ 186 ಎಸ್‌ಆರ್‌ಎಸ್ 2018 ದಿನಾಂಕ:15.05.2019 ಮತ್ತು ಸಿಆಸುಇ 3 ಎಸ್‌ಆರ್‌ಎಸ್ 2019 ದಿನಾಂಕ:04.06.2019 ರ ಮಾರ್ಗಸೂಚಿಯಂತೆ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವಿವಿಧ ವೃಂದದ ಜೇಷ್ಠತಾ ಪಟ್ಟಿಗಳನ್ನು ಅಂತಿಮಗೊಳಿಸಲು ಪರಾಮರ್ಶ ಸಮಿತಿ ರಚಿಸಿ, ಸದರಿ ಸಮಿತಿ ವರದಿ ಆಧರಿಸಿ ಕೈಗಾರಿಕಾ ಉತ್ತೇಜನಾಧಿಕಾರಿ ವೃಂದದಿಂದ ಗ್ರೂಪ್ 'ಡಿ' ವೃಂದದವರೆಗೆ ಒಟ್ಟು 12 ವೃಂದಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ಆಯುಕ್ತರ ಅಧಿಸೂಚನೆ ಸಂಖ್ಯೆ:ಕೈವಾಇ/ಆಡಳಿತ/ಸಿಬ್ಬಂದಿ/ಅಧೀ/24/2019-20, ದಿನಾಂಕ: 18.03.2020 ರಲ್ಲಿ ಪ್ರಕಟಿಸಲಾಗಿರುತ್ತದೆ<br><br>ದಿನಾಂಕ-:04-03-2020 ರಲ್ಲಿ ಸಹಾಯಕ ನಿರ್ದೇಶಕ ವೃಂದದ ಜೇಷ್ಠತೆಯನ್ನು ಪರಿಷ್ಕರಿಸಲು ಮಾತ್ರ ಸಮಿತಿಯನ್ನು ರಚಿಸಲಾಗಿದ್ದು, ಅದರಂತೆ, ಸಹಾಯಕ ನಿರ್ದೇಶಕ ವೃಂದದ ಜೇಷ್ಠತಾಪಟ್ಟಿಯನ್ನು ಮಾತ್ರ ಪರಿಷ್ಕರಿಸಲಾಗಿರುತ್ತದೆ. |
| (ಆ) | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಹಾಗೂ ನಿವೃತ್ತರಾದ ಹಿರಿಯ ಕೈಗಾರಿಕಾ ಉತ್ತೇಜನ ಅಧಿಕಾರಿ ವೃಂದದ ಅಧಿಕಾರಿ ವರ್ಗದವರಿಗೆ ಸಹಾಯಕ ನಿರ್ದೇಶಕರ ಹುದ್ದೆಗೆ ಮುಂಬಡ್ತಿ ನೀಡುವಾಗ ವೃಂದ ಮತ್ತು ನೇಮಕಾತಿ ನಿಯಮ ಹಾಗೂ ಜೇಷ್ಠತಾ ನಿಯಮಗಳನ್ನು ಪಾಲಿಸದೆ ಜೇಷ್ಠತೆಯಲ್ಲಿ ಇವರಿಗಿಂತ ಕಿರಿಯರಾದ ಹಾಗೂ ಅನರ್ಹರಾದ ಅಧಿಕಾರಿಗಳಿಗೆ ಸಹಾಯಕ ನಿರ್ದೇಶಕರ ಹುದ್ದೆಗೆ ಮುಂಬಡ್ತಿ ನೀಡಿರುವುದು ನಿಯಮಬಾಹಿರವಲ್ಲವೆ: | ಸರ್ಕಾರದ ಆದೇಶ ಸಂಖ್ಯೆ:ವಾಕೈ 189 ಕೈಸೇವಿ 2014, ದಿನಾಂಕ:23.12.2016 ರಲ್ಲಿ ಇಲಾಖೆಯಲ್ಲಿ ಮಂಜೂರಾಗಿದ್ದ 77 ಕೈಗಾರಿಕಾ ಉತ್ತೇಜನಾಧಿಕಾರಿ ಹುದ್ದೆಗಳನ್ನು ಸಹಾಯಕ ನಿರ್ದೇಶಕರ ಹುದ್ದೆಗೆ ಮೇಲ್ದರ್ಜೆಗೇರಿಸಿ ವಿಲೀನಗೊಳಿಸಿದ್ದು, ಕೈಗಾರಿಕಾ ಉತ್ತೇಜನಾಧಿಕಾರಿ ಹುದ್ದೆಗಳು ರದ್ದಾಗಿರುತ್ತದೆ. |

| | | |
|---|---|---|
| (ಇ) | ಮುಂಬಡ್ತಿಯ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಿದ ಮೇಲೆ ಜೇಷ್ಠತಾ ಪಟ್ಟಿಯಲ್ಲಿನ ತಾರತಮ್ಯವನ್ನು ಸರಿಪಡಿಸಲು ಕೈಗಾರಿಕಾ ಉತ್ತೇಜನ ಅಧಿಕಾರಿ ವೃಂದದ ಅಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದ್ದರೂ ಸಹ ಮುಂಬಡ್ತಿ ನೀಡದಿರಲು ಕಾರಣವೇನು(ವಿವರ ನೀಡುವುದು) | (ಪವಿತ್ರ-1) ಸಿವಿಲ್ ಅಪೀಲ್ ಸಂಖ್ಯೆ:2368/2011 ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ:09.02.2017ರ ತೀರ್ಪಿನ ಹಿನ್ನೆಲೆಯಲ್ಲಿ ಆಯುಕ್ತರ ಅಧಿಸೂಚನೆ ಸಂಖ್ಯೆ:ಕೈವಾಇ/ಆಡಳಿತ/ ಸಿಬ್ಬಂದಿ/ಅಧೀ/218/2017-18, ದಿನಾಂಕ: 15.12.2017 ರಲ್ಲಿ ಕೈಗಾರಿಕಾ ಉತ್ತೇಜನಾಧಿಕಾರಿ ವೃಂದದ ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸಲಾಗಿರುತ್ತದೆ.<br><br>(ಪವಿತ್ರ-2) ತದನಂತರದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎಂ.ಎ. ಸಂಖ್ಯೆ 1151/2018 ಮತ್ತು ರಿಟ್ ಅರ್ಜಿ ಸಂಖ್ಯೆ:764/2018 ಹಾಗೂ ಸಂಬಂಧಿಸಿದ ಪ್ರಕರಣಗಳಲ್ಲಿ ದಿನಾಂಕ:10.05.2019 ರಂದು ನೀಡಿರುವ ತೀರ್ಪಿನ ಮೇರೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಆದೇಶ ಸಂಖ್ಯೆ: ಸಿಆಸುಇ 186 ಎಸ್‌ಆರ್‌ಎಸ್ 2018 ದಿನಾಂಕ:15.05.2019 ಮತ್ತು ಸಿಆಸುಇ 3 ಎಸ್‌ಆರ್‌ಎಸ್ 2019 ದಿನಾಂಕ:04.06.2019 ರ ಮಾರ್ಗಸೂಚಿಯಂತೆ ಕೈಗಾರಿಕಾ ಉತ್ತೇಜನಾಧಿಕಾರಿ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಆಯುಕ್ತರ ಅಧಿಸೂಚನೆ ಸಂಖ್ಯೆ:ಕೈವಾಇ/ಆಡಳಿತ/ಸಿಬ್ಬಂದಿ/ಅಧೀ/24/2019-20, ದಿನಾಂಕ: 18.03.2020 ರಲ್ಲಿ ಪ್ರಕಟಿಸಲಾಗಿರುತ್ತದೆ.<br><br>ಸದರಿ ಜೇಷ್ಠತಾ ಪಟ್ಟಿಯನ್ವಯ ಕೈಗಾರಿಕಾ ಉತ್ತೇಜನಾಧಿಕಾರಿಗಳನ್ನು ಮುಂಬಡ್ತಿಗೆ ಪರಿಗಣಿಸುವಂತಹ ಪ್ರಕರಣಗಳಿರುವುದಿಲ್ಲ. |
| (ಈ) | ಇಲಾಖೆಯು ಹಿರಿಯ ಕೈಗಾರಿಕಾ ಉತ್ತೇಜನ ಅಧಿಕಾರಿಗಳ ಜೇಷ್ಠತಾಪಟ್ಟಿ ತಯಾರಿಸುವಲ್ಲಿ ಆಗಿರುವ ತಾರತಮ್ಯದಿಂದ ಮುಂಬಡ್ತಿಯಿಂದ ವಂಚಿತರಾದ ಈ ವರ್ಗದ ಅಧಿಕಾರಿಗಳಿಗೆ, ಸೇವಾ ಕಾಲಾವಧಿಯಲ್ಲಿ ದೊರಕಬೇಕಾದ ಕಾಲ್ಪನಿಕ ಮುಂಬಡ್ತಿ ಹಾಗೂ ಇತರೆ ಆರ್ಥಿಕ ಸೌಲಭ್ಯ ಪಡೆಯಲು ಇಲಾಖೆ ಕ್ರಮವಹಿಸುವುದೇ? | (ಪವಿತ್ರ-2) ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎಂ.ಎ. ಸಂಖ್ಯೆ 1151/2018 ಮತ್ತು ರಿಟ್ ಅರ್ಜಿ ಸಂಖ್ಯೆ:764/2018 ಹಾಗೂ ಸಂಬಂಧಿಸಿದ ಪ್ರಕರಣಗಳಲ್ಲಿ ದಿನಾಂಕ:10.05.2019 ರಂದು ನೀಡಿರುವ ತೀರ್ಪಿನ ಮೇರೆಗೆ ಕೈಗಾರಿಕಾ ಉತ್ತೇಜನಾಧಿಕಾರಿ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಆಯುಕ್ತರ ಅಧಿಸೂಚನೆ ಸಂಖ್ಯೆ: ಕೈವಾಇ/ಆಡಳಿತ/ಸಿಬ್ಬಂದಿ/ಅಧೀ/24/2019-20, ದಿನಾಂಕ: 18.03.2020 ರಲ್ಲಿ ಪ್ರಕಟಿಸಲಾಗಿರುತ್ತದೆ.<br><br>ಸದರಿ ಜೇಷ್ಠತಾ ಪಟ್ಟಿಯನ್ವಯ ಕೈಗಾರಿಕಾ ಉತ್ತೇಜನಾಧಿಕಾರಿಗಳನ್ನು ಮುಂಬಡ್ತಿಗೆ ಪರಿಗಣಿಸುವಂತಹ ಪ್ರಕರಣಗಳಿರುವುದಿಲ್ಲ. |

ವಾಕ್ಯ 138 ಕೈಸೇವಿ 2021

( ಎನ್.ನಾಗರಾಜು(ಎಂ.ಟಿ.ಬಿ) )
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು